**INDIAN JOURNAL OF HISTORY AND ARCHAEOLOGY**
ISSN (e):2582-225X
Vol-3, Issue -4, November-December, 2021,
PageNo,82-88
Peer Reviewed Journal, Referred Journal

# ಭಾರತದ ಪರಂಪರೆಯ ಪರಿವರ್ತನಾ ಚಳವಳಿಗಳ ಒಂದು ಚಾರಿತ್ರಿಕ ವಿಮರ್ಶೆ

**ಡಾ.ಕೆ.ಪ್ರಭು**[1]

ಭಾರತ ದೇಶವು ಜಗತ್ತಿನಲ್ಲಿಯೇ ವಿಶಿಷ್ಟ ಹಾಗೂ ವೈವಿಧ್ಯಮಯ ಪರಂಪರೆಯನ್ನು ಹೊಂದಿರುತ್ತದೆ. ಏಕೆಂದರೆ, ಇದು ಹಲವು ಜಾತಿ, ಜನಾಂಗ, ಧರ್ಮ ಮತ್ತು ಸಂಸ್ಕೃತಿಗಳಿಂದ ಕೂಡಿದೆ. ವಿಶ್ವದ ಚಾರಿತ್ರಿಕ ನಕಾಶೆಯಲ್ಲಿ ಭಾರತಕ್ಕೆ ತನ್ನದೇ ಆದಂತಹ ಒಂದು ಪವಿತ್ರವಾದ ಸ್ಥಾನವೂ ಕೂಡ ಇದೆ. ಇದು ಕಲೆ, ಸಾಹಿತ್ಯ, ಸಂಗೀತ ಮತ್ತು ತತ್ವಜ್ಞಾನಕ್ಕೂ ಹೆಸರಾಗಿದೆ. ಇಂತಹ ವಿಭಿನ್ನವಾದಂತಹ ಸಂಪನ್ಮೂಲಗಳಿಂದ ಕೂಡಿದ ಶ್ರೀಮಂತ ದೇಶವಾದ ಈ ಭಾರತ ದೇಶವು ಅನೇಕ ಸಂಸ್ಕೃತಿಗಳ ಸಂಗಮದಿಂದ ಕೂಡಿದೆ. ಈ ದೇಶದಲ್ಲಿ ಅನೇಕ ಮಹಾನಾಯಕರು, ಮೇಧಾವಿಗಳು, ಕವಿಗಳು, ಚಿಂತಕರು, ಧರ್ಮ ಆರಾಧಕರು, ಋಷಿಮುನಿಗಳು, ತಪಸ್ವಿಗಳು, ಆಧ್ಯಾತ್ಮಿಕ ಮಹಾನ್ ಜ್ಞಾನಿಗಳು, ಲೋಕಿಕ ಪ್ರೇಮಿಗಳು, ಅನುಭಾವಿ ಕವಿಗಳು, ಸಮಾಜ ಸುಧಾರಕರು, ಸ್ವಾತಂತ್ರ್ಯ ಹೋರಾಟಗಾರರು, ವಿಶ್ವಕಂಡ ಮಹಾನ್ ಪ್ರತಿಭವಂತರು ಮತ್ತು ಪ್ರತಿಭಾನ್ವಿತರು ಆಗಿ ಹೋಗಿದ್ದಾರೆ. ಆದರೆ, ವೈಪರಿತ್ಯವೆಂದರೆ; ನಮ್ಮ ಈ ದೇಶದಲ್ಲಿ ಇರುವಷ್ಟು ಧರ್ಮ-ದೇವರುಗಳು ಇಡೀ ವಿಶ್ವದ ಯಾವ ದೇಶದಲ್ಲಿಯೂ ಇಲ್ಲದೇ ಇರುವುದು ಒಂದು ಜಾಗತಿಕ ಸಂಗತಿಯಾಗಿದೆ. ಏಕೆಂದರೆ ಯಾವ ದೇಶದಲ್ಲಿ ಹೆಚ್ಚೆಚ್ಚು ಧರ್ಮ-ದೇವರುಗಳು ಇರುತ್ತವೆಯೋ ಆ ದೇಶ ಕುರುಡು ಸಂಪ್ರಾದಾಯದಿಂದ ಕೂಡಿರುತ್ತದೆ ಎಂಬ ಮಾತು ಸತ್ಯದಿಂದ ಕೂಡಿದೆ. ಮತ್ತೇ ಧರ್ಮ-ದೇವರುಗಳು ಕೇವಲ ಮತೀಯವಾದಿ ಮತ್ತು ಪುರೋಹಿತ'ಶಾಹಿಗಳ ಕಪಿಮುಷ್ಠಿಯಲ್ಲಿರುವುದೇ ಇದಕ್ಕೆ ಕಾರಣವಾಗಿದೆ.

ಧರ್ಮ-ದೇವರು ಮತ್ತು ಆಚರಣೆ ಇವುಗಳ ಹೆಸರಿನಲ್ಲಿ ಇವರು ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳುತ್ತಿದ್ದಾರೆ. ಆದರೆ ಧರ್ಮ-ದೇವರಗಳ ನಿಜವಾದ ಅರ್ಥ, ಸ್ವರೂಪ ಮತ್ತು ವ್ಯಾಖ್ಯಾನಗಳನ್ನು ಜನಸಾಮಾನ್ಯರಿಗೆ ತಿಳಿಸದೆ ಜನಸಾಮಾನ್ಯರನ್ನು ಕೇವಲ ಮೌಢ್ಯದಲ್ಲಿ ತಳ್ಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಚಾತುರ್ವರ್ಣ್ಯ ವ್ಯವಸ್ಥೆ ಮತ್ತು ಪುರುಷ ಪ್ರಧಾನ ವ್ಯವಸ್ಥೆ ಇವುಗಳು

1. **ಸಹ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು**

ಅಸ್ಪೃಶ್ಯರನ್ನು, ಅಬಲೆಯರನ್ನು, ಅಸಾಯಕರನ್ನು, ಮಹಿಳೆಯರನ್ನು, ಅಲ್ಪಸಂಖ್ಯಾತರನ್ನು ಶೋಷಣೆಗೆಡೆ ಮಾಡಿರುವ ಸಂಗತಿ ಇತಿಹಾಸದ ಪುಟಗಳಲ್ಲಿ ದಾಖಲೆಯಾಗಿದೆ.

ಸುಮಾರು ಐದು ಸಾವಿರ ವರ್ಷಗಳಿಂದಲೂ ಭಾರತದಲ್ಲಿ ಮುಂದುವರೆದುಕೊಂಡು ಬಂದ ಅಸಹ್ಯವಾದ ಪದ್ಧತಿ ಎಂದರೆ ಅದುವೇ, ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯಾಗಿದೆ. ಈ ಜಾತಿ ಪದ್ಧತಿ ಎಂಬ ರೋಗದ ಮೊದಲ ಲಕ್ಷಣವೆಂದರೆ; ಅಸ್ಪೃಶ್ಯತೆಯೇ ಆಗಿದೆ. ಶತಶತಮಾನಗಳು ಉರುಳಿದರು, ರಾಜ್ಯ-ಸಾಮ್ರಾಜ್ಯಗಳು ಆಳಿದರು, ಈ ದೇಶದ-ರಾಜ್ಯದ ಆಡಳಿತದ ಚುಕ್ಕಾಣಿ ಯಾವ ವಂಶದವರು ಹಿಡಿದರೂ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ ಇವುಗಳು ಹಾಗೆಯೇ ಉಳಿದುಕೊಂಡು ಬರುತ್ತಿವೆ. ಇವತ್ತಿನ ಜಾಗತಿಕರಣದ ಸಂದರ್ಭದಲ್ಲಿಯೂ ಅಮಾನವೀತೆಯಿಂದ ಕೂಡಿದ ಈ ಮಾನಸಿಕ ರೋಗವನ್ನು ವಾಸಿಗೊಳಸಲು, ಹೊಡೆದು ಹಾಕಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಬಲವಾದ ಕಾರಣ ಚಾತುರ್ವರ್ಣ್ಯ ವ್ಯವಸ್ಥೆ, ಧರ್ಮ-ದೇವರುಗಳೆಂಬ ಅವೈಜ್ಞಾನಿಕತೆಯೇ ಇವುಗಳಿಗೆ ಕಾರಣವಾಗಿವೆ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಯುಗ ಪರಿವರ್ತನೆ ಮಾಡುವುದಕಾಗಿಯೇ ಬುದ್ಧಗುರು, ಮಹಾವೀರ, ರಾಮನುಜರು, ಚಕ್ರಧರ, ರಮಾನಂದ, ಚೈತನ್ಯ, ಏಕನಾಥ, ತುಕಾರಾಮ, ರೋಹಿದಾಸ, ಚೋಖಾಮೇಳ, ಡಾ॥ ಭಂಡಾರ್‌ಕರ್, ಬಸವಣ್ಣ, ಸಂತಕಬೀರ ಕನಕದಾಸ, ಮಹಾತ್ಮ ಜ್ಯೋತಿ ಬಾಘುಲೆ, ಗೋಪಾಲ ಬಾಬಾ ವಲಂಗ್‌ಕರ್, ರಾಜಾರಾಮ ಮೋಹನರಾಯ, ಬರೋಡದ ಮಹಾರಾಜ ಶ್ರೀ ಸಯ್ಯಾಜಿರಾವ್ ಗಾಯಕ್‌ವಾಡ್, ಕೊಲ್ಲಾಪುರದ ಛತ್ರಪತಿ ಸಾಹುಮಹಾರಾಜ, ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್, ಕರ್ನಲ್ ಒಲ್ಕಾಟ್, ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರಂತಹ ಮಹಾನ್ ದಾರ್ಶನಿಕರು ಹುಟ್ಟಿ ಬಂದರೆಂದು ತಿಳಿದುಬರುತ್ತದೆ. ಇವರು ಈ ದೇಶದ ದಮನಿತ ಜನಾಂಗದ ಏಳಿಗೆಗಾಗಿ ದುಡಿದ್ದಿದಾರೆ. ಅಂದರೆ ಬ್ರಾಹ್ಮಣೇತರ, ಅಸ್ಪೃಶ್ಯರ, ಸರ್ವತೋಮುಖ ಬೆಳವಣಿಗೆಗಾಗಿ ತಮ್ಮ ಪ್ರಾಣವನ್ನೇ ಮುಡುಪಾಗಿಟ್ಟಿರುವುದು ಕಂಡುಬರುತ್ತದೆ.

ಭಾರತ ದೇಶದ ಅವಮಾನಿತ ನೆಲೆಯಿಂದ ಮೇಲೆದ್ದು ಬಂದವರು ಡಾ.ಬಿ.ಆರ್.ಅಂಬೇಡ್ಕರ್. ಇವರು ಅಸ್ಪೃಶ್ಯತೆ, ಬಡತನ, ದಾರಿದ್ರ್ಯ ಇವುಗಳನ್ನು ಕಿತ್ತೊಗೆಯಲು ಹಗಲಿರುಳು ಶ್ರಮಿಸಿದರಲ್ಲದೆ ಭಾರತಕ್ಕೊಂದು ಜಾತ್ಯಾತೀತವಾದ ಭದ್ರಬುನಾದಿಯನ್ನೇ ನಿರ್ಮಿಸಿದ ಮಹಾಚಿಂತಕರು ಮತ್ತು ಮಹಾನಾಯಕ ಡಾ. ಬಿ.ಆರ್.ಅಂಬೇಡ್ಕರ್. ಇವರು ತಳವರ್ಗದವರಲ್ಲಿ ಜೀವನ ಉತ್ಸವವನ್ನು ಕಟ್ಟಿಕೊಡುವಲ್ಲಿ ದುಡಿದವರು. ಸ್ವಾತಂತ್ರ್ಯ, ಸಮಾನತೆ, ಭಾತೃತ್ವ, ಬಂಧುತ್ವ, ಸಹೋದರತ್ವ ಈ ಕಲ್ಪನೆಗಳನ್ನು ಇಟ್ಟುಕೊಂಡು ಇಲ್ಲಿಯ ಜನರನ್ನು ಬದುಕಿಸುವುದಕ್ಕಾಗಿ ಹಗಲಿರುಳು ಚಿಂತನಗೈದು ಸ್ವಾತಂತ್ರ್ಯದ ನಿಜಾರ್ಥವನ್ನು, ಸಮಾನತೆ ಮತ್ತು ಭಾತೃತ್ವದ ಮೌಲ್ಯವನ್ನು ಮನವರಿಕೆ ಮಾಡಿದ'ವರಲ್ಲಿ ಪ್ರಥಮರಾಗಿದ್ದಾರೆ.

ಈ ದಿಸೆಯಲ್ಲಿ ಬಹುಸಂಖ್ಯಾತ ಶೋಷಿತ ವರ್ಗಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರಗತಿಪರ ಚಳುವಳಿ ಬಹುಮುಖ್ಯ ಪಾತ್ರವಹಿಸಿದೆ. ಹೀಗಾಗಿ ಈ ಚಳುವಳಿಯನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರ ಹಿಂದಿನವರಾದ ಬುದ್ಧ, ಬಸವ, ಕಬೀರದಾಸ, ಕನಕದಾಸ ಮತ್ತು ಜ್ಯೋತಿಬಾ ಫುಲೆ ಇವರ ಪ್ರಗತಿಪರ ಚಳುವಳಿಗಳೊಂದಿಗೆ ಸಮೀಕರಿಸಿ ಪ್ರಸ್ತುತ ಲೇಕನದಲ್ಲಿ ಭಾರತ ದೇಶದ ಮಟ್ಟದಲ್ಲಿ ನಡೆದ ಚಳುವಳಿಗಳನ್ನು ಗುರುತಿಸುವಂತಹ ಪ್ರಯತ್ನವನ್ನು ಮಾಡಲಾಗಿದೆ. ಆದರೆ ಮುಖ್ಯವಾಗಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಕೇಂದ್ರ ಬಿಂದುವಾಗಿಟ್ಟುಕೊಂಡು ಚರ್ಚೆ ಮಾಡಲಾಗಿದೆ. ಅಂದರೆ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಪೂರಕ ಮತ್ತು ಪ್ರೇರಕವಾದ ಪರಿಸರ, ಅವರು ಚಿಂತನೆಗೈದು ಕೈಕೊಂಡ ಕ್ರಮಗಳು, ಅವರು ಇಟ್ಟ ದಿಟ್ಟ ಹೆಜ್ಜೆಗಳನ್ನು ದಾಖಲಿಸಲು ಪ್ರಸ್ತುತ ಲೇಖನದಲ್ಲಿ ದಾಖಲಿಸಲಾಗಿದೆ. ಬುದ್ಧ ಪರಿಸರ ಪ್ರಗತಿಪರ ಚಳುವಳಿಯನ್ನು, ಬಸವ ಪರಿಸರದ ಚಳುವಳಿಯನ್ನು, ಸಂತ ಕಬೀರ್ ಮತ್ತು ಕನಕದಾಸ ಇವರ ಪರಿಸರದ ಪ್ರಗತಿಪರ ಚಳುವಳಿಯನ್ನು, ಮಹಾತ್ಮ ಜ್ಯೋತಿ ಬಾಫುಲೆ ಅವರ ಪರಿಸರದ ಪ್ರಗತಿಪರ ಚಳುವಳಿಯನ್ನು ಕರಿತು ಈ ಮುಂದಿನಂತೆ ಚರ್ಚಿಸಲಾಗಿದೆ.

ಭಾರತದ ಸಂದರ್ಭದಲ್ಲಿನ ಪ್ರಗತಿಪರ ಚಳುವಳಿಯಲ್ಲಿ ಬುದ್ಧ ಮತ್ತು ಆತನ ಪರಿಸರದ ಶಾಂತಿ ಭಾರತ, ಬಸವಣ್ಣ ಮತ್ತು ಆತನ ಪರಿಸರದ ಸಮಾನತೆಯ ಭಾರತ, ಕಬೀರದಾಸ ಮತ್ತು ಕನಕದಾಸ ಇವರ ಪರಿಸರದ ಜಾತ್ಯಾತೀತ ಭಾರತ, ಜ್ಯೋತಿ ಬಾಫುಲೆ ಮತ್ತು ಆತನ ಪರಿಸರದ ಸತ್ಯಶೋಧಕ ಭಾರತ ಮತ್ತು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಇವರ ಪರಿಸರದ ಪ್ರಬುದ್ಧ ಭಾರತ ಎನ್ನಬಹುದು. ಈ ಕಲ್ಪನೆಗಳು ಈ ಮಹಾನೀಯರ ಪ್ರಗತಿಪರ ಚಳುವಳಿಗಳಿಂದಲೇ ಮೂಡಿಬಂದಿವೆ. ಹೀಗಾಗಿ ಸಮಸ್ತ ಭಾರತದ ಅಧ್ಯಯನವನ್ನು ಈ ಪ್ರಗತಿಪರ ಚಳುವಳಿಗಳ ಮೇಲೆ ಅವಲಂಬನೆಯಾಗಿದೆ.

**ಬುದ್ಧ ಪರಿಸರದ ಪ್ರಗತಿಪರ ಚಳುವಳಿ**

ಆಧುನಿಕ ಜಗತ್ತಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗೆ ಅವರದೇ ಆದ ಒಂದು ವೈಶಿಷ್ಟ್ಯತೆ ಇದೆ. ಏಕೆಂದರೆ ಅವರ ಪ್ರಗತಿಪರ ವೈಚಾರಿಕ ನಿಲುವುಗಳಿಂದ. ಅಂಬೇಡ್ಕರ್ ಎಂದರೆ ಈ ನಾಡಿನ ಸಂಸ್ಕೃತಿ ಅಷ್ಟೇ ಅಲ್ಲ. ದಲಿತರ, ಶೋಷಿತರ, ಮಹಿಳೆಯರ ಬದುಕು ಆಗಿದೆ. ಅಂಬೇಡ್ಕರ್ ಎಂಬ ಜೀವ ದ್ರವ್ಯವನ್ನು ಸವಿಯದಿದ್ದರೆ ಈ ದೇಶದ ಬಹು ಸಂಖ್ಯಾತ ಸಮುದಾಯಕ್ಕೆ ಜೀವನವೇ ಇಲ್ಲದಂತಾಗುತ್ತದೆ. ದೇಶದ ಮುಕ್ಕಾಲು ಭಾಗದಷ್ಟಿರುವ ದಲಿತ ಶೋಷಿತರು ಮಹಿಳೆಯರಾದಿಯಾಗಿ ಇಂದು ಸ್ವತಂತ್ರ ಮತ್ತು ಸ್ವಾಭಿಮಾನದ ಬದುಕು ನಡೆಸುವಂತದಾಗಿದೆಯೆಂದರೆ ಅದಕ್ಕೆ ಅಂಬೇಡ್ಕರ್ ಎಂಬ ಬಹುದೊಡ್ಡ ಮಹಾನಾಯಕರ ಮಾನವಪರ ಮತ್ತು ಪ್ರಗತಿಪರ ಚಿಂತನೆಯೇ ಪ್ರಧಾನ ಕಾರಣವಾಗಿದೆ. ಈ ಪ್ರಗತಿಪರ ಚಿಂತನೆ ಇಂದು ಜಗತ್ತಿನ ಶೋಷಿತ ವರ್ಗಕ್ಕೆ ಬಿಡುಗಡೆಯ

ಮಾರ್ಗವಾಗಿ ಪರಿಣಮಿಸಿದೆ. ಈ ತರಹದ ಬಿಡುಗಡೆಗೆ ಕಾರಣವಾಗುವ ಚಿಂತನೆ ಈ ಹಿಂದೆ ಎಲ್ಲಿಯೂ ಇರಲಿಲ್ಲವೆಂದಲ್ಲ. ಅಂಬೇಡ್ಕರ್ ಅವರಿಗಿಂತಲೂ ಸುಮಾರು ಎರಡು ಸಾವಿರದ ಐದು ನೂರು ವರ್ಷಗಳ ಹಿಂದೆ ಜಗತ್ತಿನ ಮಹಾಗುರು ಬುದ್ಧರು ಧಾರ್ಮಿಕ ನೆಲೆಯಲ್ಲಿ ಬೋಧನೆ ಮಾಡುವುದರ ಮೂಲಕ ಶೋಷಿತರಿಗೆ, ಅಬಲೆಯರಿಗೆ ಮಾರ್ಗದಾತನಾಗಿ, ದನಿ ಇಲ್ಲದ ಸಮುದಾಯಕ್ಕೆ ದನಿಯಾಗಿ ಇವತ್ತಿಗೂ ಜಗತ್ತಿಗೆ ಬೆಳಕಾಗಿರುವುದು ಗುರುಬುದ್ಧ ತನ್ನ ಪ್ರಗತಿಪರ ವಿಚಾರಗಳಿಂದ ಬಿಡುಗಡೆಯ ಹಾದಿಗಳನ್ನು ಸೃಷ್ಟಿಸಿದವರು.

**ಬಸವ ಪರಿಸರದ ಪ್ರಗತಿಪರ ಚಳುವಳಿ**

ಬಸವ ಪರಿಸರದ ಪ್ರಗತಿಪರ ಚಳುವಳಿಯು ಗುರುಬುದ್ಧನ ಅನಂತರದ ಬಸವಾದಿ ಶರಣರು ವೈಚಾರಿಕ ಚಿಂತನೆಯ ದೃಷ್ಟಿಯಿಂದ ಮತ್ತು ಜೀವಪರ ಕಾಳಜಿಯ ನೆಲೆಯಿಂದ ಈ ಮೂವರು (ಬುದ್ಧ, ಬಸವ, ಅಂಬೇಡ್ಕರ್) ಭಿನ್ನರಾಗಿಲ್ಲ. ಆದರೆ, ಮನೋವಾದಿ ಚಿಂತಕರು ಮತ್ತೇ ಅದೇ ಹಳೆಯ ರಾಗವನ್ನು ಎತ್ತುವುದರ ಮೂಲಕ ಬುದ್ಧ, ಬಸವ, ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಅವತಾರಿ ಪುರುಷರೆಂದು ಹೇಳುತ್ತಾ, ಪ್ರಚಾರ ಮಾಡುತ್ತಾ ಅವರ ಚಿಂತನೆಗಳನ್ನು ಜಡೆ ಮತ್ತು ಜನಿವಾರದಲ್ಲಿ ಸಿಲುಕಿಸಲು ಹೊರಟಿದ್ದಾರೆ. ಆದರೆ, ಬಸವ ಪರಿಸರದಲ್ಲಿ ಅನೇಕ ಶರಣರು ತಮ್ಮ ವೈಚಾರಿಕ ನಿಲುವಿನಿಂದ ಸಮಾಜೋದ್ಧಾರದಲ್ಲಿ ತೊಡಗಿದ್ದರು. ಹೀಗಾಗಿ ಮಹಾಗುರು ಬುದ್ಧರ ಅನಂತರ ಬಹುದೊಡ್ಡ ಪ್ರಗತಿಪರ ಚಳುವಳಿ ಎಂದರೆ ಕರ್ನಾಟಕದ ಸಂದರ್ಭದಲ್ಲಿ ತಳಮೂಲದಿಂದ ಮೂಡಿಬಂದಿರುವಂತಹ ಬಸವ ಪರಿಸರದ ಚಳುವಳಿಯಾಗಿದೆ ಎಂಬುದನ್ನು ಪ್ರಸ್ತುತ ಲೇಖನದಲ್ಲಿ ಈ ಮೂರರಲ್ಲಿ ಗುರುತಿಸಲಾಗಿದೆ. ಅಂದರೆ, ಬಸವಣ್ಣ ಅವರ ಕಾಲಘಟ್ಟದ ಸಾಮಾಜಿಕ ಕ್ರಾಂತಿ, ಬಸವಣ್ಣ ಅವರ ಸಮಾಜಮುಖಿ ಚಿಂತನೆ, ಬಸವಣ್ಣ ಅವರ ದೃಷ್ಟಿಯಲ್ಲಿ ಕಾಯಕ ಮತ್ತು ದಾಸೋಹ, ಜಾತಿ ಕಲ್ಪನೆ, ಶರಣರ ವಚನಗಳಲ್ಲಿ ಅಭಿವ್ಯಕ್ತಿ, ಸಮಾಜಿಕ ವಿಡಂಬನೆ ಮತ್ತು ಸಮಾಜಮುಖಿ ಮತ್ತು ಜನಮುಖಿ ಚಿಂತನೆಗೆ ಹೆಚ್ಚು ತೆತ್ತುಕೊಂಡಿದ್ದವು.

**ಸಂತ ಕಬೀರ್ ಮತ್ತು ಕನಕದಾಸರ ಪರಿಸರದ ಪ್ರಗತಿಪರ ಚಳುವಳಿ**

ಬುದ್ಧ ಪರಿಸರದ ಚಳುವಳಿ ಮತ್ತು ಬಸವ ಪರಿಸರದ ಚಳುವಳಿ ಇವುಗಳ ಅನಂತರದಲ್ಲಿ ಸಂತ ಕಬೀರರು ಮತ್ತು ಕನಕದಾಸರ ಪರಿಸರದ ಪ್ರಗತಿಪರ ಚಳುವಳಿಗಳು ಪ್ರಾರಂಭವಾಗಿ ಇವರ ಚಳುವಳಿಗಳು ತಮ್ಮ ಶ್ರೇಷ್ಠ ವಿಚಾರಗಳಿಂದ ಜಡುಗಟ್ಟಿದ ಈ ಭಾರತೀಯ ಸಮಾಜವನ್ನು ತೊಳೆಯುವ ಕೆಲಸ ಮಾಡಿದವು. ಅಂದರೆ ಸಂತ ಕಬೀರರು ಜಾತಿಯತೆ ಕುರಿತು ವಿಡಂಬಿಸಿರುವುದನ್ನು ಅವರ ಈ ಒಂದು ಹಾಡಿನಿಂದ ತಿಳಿದುಕೊಳ್ಳಬಹುದು. ಅದು ಈ ಮುಂದಿನಂತೆ ಇದೆ. ನಹಿ ಕೋ ಊಂಚಾ ನಹಿ

ಕೋ ನೀಚಾ, ಜೆತು ಬಾಮ್ಹ ನಿ ಜಾಯ, ತು ಆನ ಬಾಟವ್ಹೈ ಶಾಹೆ ನ ಆಯಾ?॥, ಕನಕದಾಸರು ಕುಲ, ಜಾತಿಯತೆ ಮಾಡುವರನ್ನು ಕುರಿತು ವಿಡಂಬಿಸಿರುವುದು ಅವರ ಈ ಒಂದು ಕೀರ್ತನೆಯಿಂದ ತಿಳಿದುಕೊಳ್ಳಬಹುದು. ಅದು ಈ ಮುಂದಿನಂತಿದೆ. ಕುಲಕುಲವೆನ್ನುತಿಹರು, ಕುಲವ್ಯಾವುದು ಸತ್ಯಸುಖವುಳ್ಳ ಜನರಿಗೆ, ಕೆಸರೋಳು ತಾವರೆ ಪುಟ್ಟಲು, ಅದತಂದ ಬಿಸಜನಾಭನಿಗರ್ಪಿಸಲಿಲ್ಲವೆ, ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವ, ವಸುಧೆಯೊಳಗೆ ಭೂಸೂರರುಣ್ಣಲಿಲ್ಲವೆ.....?॥ ಎನ್ನುವ ಹಲವಾರು ಪ್ರಶ್ನೆಗಳನ್ನು ಈ ಮಹಾನೀಯರು ಎತ್ತುವುದರ ಮೂಲಕ ಜಾತಿ ಪದ್ಧತಿಯ ಬುಡವನ್ನೇ ಅಲ್ಲಾಡಿಸಿರುವುದು ಕಂಡುಬರುತ್ತದೆ. ಅಂದರೆ ದೇವೆರ ಬಗೆಗೆ ಬುದ್ಧರ ನಿಲುವು, ಸಂತ ಕಬೀರ ಜನನ–ಜೀವನ ಕುರಿತು ಚಿಂತನೆ, ಕಬೀರರ ಸಮಾಜಮುಖಿ ಚಿಂತನೆ, ಕನಕದಾಸರ ಜೀವನ ಮತ್ತು ಕೃತಿಗಳ ಅವಲೋಕನ, ಕನಕದಾಸರ ಹಾಡುಗಳಲ್ಲಿ ಭಕ್ತಿ–ಭಾವ ಮತ್ತು ಇವರ ಹಾಡುಗಳಲ್ಲಿ ಸಮಾಜಮುಖಿ ಚಿಂತನೆಗಳನ್ನು ಬಿಡುಗಡೆಯ ಹಾದಿಗಳನ್ನು ಬಿತ್ತಿರುತ್ತವೆ.

**ಜ್ಯೋತಿಬಾ ಫುಲೆ ಪರಿಸರದ ಪ್ರಗತಿಪರ ಚಳುವಳಿ**

ಬುದ್ಧ ಪರಿಸರದ ಪ್ರಗತಿಪರ ಚಳುವಳಿ, ಬಸವ ಪರಿಸರದ ಪ್ರಗತಿಪರ ಚಳುವಳಿ, ಸಂತ ಕಬೀರರ, ಕನಕದಾಸ ಇವರ ಪರಿಸರದ ಪ್ರಗತಿಪರ ಚಳುವಳಿ ಇವುಗಳ ಅನಂತರ ತುಂಬ ಪರಿಣಮಕಾರಿಯಾಗಿ ಮೂಡಿಬಂದ ಚಳುವಳಿಯೆಂದರೆ ಜ್ಯೋತಿಬಾ ಫುಲೆ ಪರಿಸರದ ಪ್ರಗತಿಪರ ಚಳುವಳಿಯಾಗಿದೆ. ಜ್ಯೋತಿಬಾ ಫುಲೆ ಪರಿಸರದ ಪ್ರಗತಿಪರ ಚಳುವಳಿಯಲ್ಲಿ ಕ್ರಾಂತಿಯ ಕಿಡಿಯಾದ ಜ್ಯೋತಿಬಾ ಫುಲೆಯವರು ಜಾತಿಯ ಬುಡ ಅಲ್ಲಾಡಿಸುವದಷ್ಟೇ ಅಲ್ಲ, ಬೇರು ಸಮೇತ ಕಿತ್ತೆಸೆಯಲು ಹೊರಟವರು. ಈ ಚಳುವಳಿಯಲ್ಲಿ ಸಾವಿತ್ರಿಬಾ ಫುಲೆ ಅವರದು ಬಹುದೊಡ್ಡ ವ್ಯಕ್ತಿತ್ವ ಮತ್ತು ಅವರ ಕೊಡುಗೆಯೂ ಕೂಡ ಅಪಾರವೇ ಆಗಿರುತ್ತದೆ ಎಂಬುದನ್ನು ಕಾಬಹುದು. ಅಂದರೆ ಬ್ರಿಟಿಷರ ಆಗಮನದಿಂದ ಜನಸಾಮಾನ್ಯರಲ್ಲಿ ಶಿಕ್ಷಣ ಪಡೆಯುವ ಹಂಬಲ, ಮಹಾತ್ಮ ಜ್ಯೋತಿಬಾ ಫುಲೆ ದಂಪತಿಗಳ ಶೈಕ್ಷಣಿಕ ಕ್ರಾಂತಿ, ಸಾಂಪ್ರಾದಾಯಿಕ ವಿವಾಹ ಸಂಸ್ಥೆಗೆ ಫುಲೆ ದಂಪತಿಗಳು ಕೊಟ್ಟ ಕೊಡಲಿ ಪೆಟ್ಟು, ಜ್ಯೋತಿಬಾ ಫುಲೆಯವರ ಸಾಮಾಜಿಕ ಕ್ರಾಂತಿ, ಸತ್ಯಶೋಧಕ ಸಮಾಜ ಸ್ಥಾಪನೆ ಈ ಮುಂತಾದ ಸಮಾಜೋಮುಖಿ ಚಿಂತನೆಗಳು ಅಸಮಾಜತೆಯ ಭಾರತೀಯ ಸಮಾಜವನ್ನು ಸಮಸಮಾಜವಾಗಿ ಪರಿವರ್ತಿಸಲು ಸಿದ್ಧ ಔಷಧಿಯೇ ಆಗಿರುತ್ತದೆ.

**ಪ್ರಗತಿಪರ ಚಳುವಳಿ**

**ಡಾ.ಬಿ.ಆರ್.ಅಂಬೇಡ್ಕರ್ ಅವರು** ಈ ಹಿಂದೆ ಚರ್ಚಿಸಿದ ಜೀವಪರ ಮತ್ತು ಮಾನವಪರ ಚಳುವಳಿಗಳ ಅನಂತರದಲ್ಲಿ ಮಹತ್ವದ ಪ್ರಗತಿಪರ ಚಳುವಳಿಯೇ ಡಾ.ಬಿ.ಆರ್.ಅಂಬೇಡ್ಕರ್ ಪರಿಸರದ ಪ್ರಗತಿಪರ ಚಳುವಳಿಯಾಗಿದೆ. ಏಕೆಂದರೆ, ಇಂತಹ ಚಳವಳಿಗೆ ಒಂದು ಸಾಂಸ್ಥಿಕ ಸ್ವರೂಪವನ್ನು ಕೊಟ್ಟವರೇ ಅಂಬೇಡ್ಕರ್. ಇವರ ಕ್ರಾಂತಿಕಾರಿಯಾದ ಈ ಚಳುವಳಿಯೂ ಇಡೀ ಸಂಪ್ರಾದಾಯಕ

ವ್ಯವಸ್ಥೆಯನ್ನೇ ಬುಡಮೇಲು ಮಾಡಿತು. ವಿಶ್ವವೇ ನಿಬ್ಬೆರಗಾಗಿ ನಿಂತು ನೋಡುವಂತಾಯಿತು. ಅಂಬೇಡ್ಕರ್ ಎಂಬುದು ಕೇವಲ ಹೆಸರಲ್ಲ. ಅದೊಂದು ಮನೋಧರ್ಮ. ಆ ಮನೋಧರ್ಮವೇ ಶಕ್ತಿಯಾಗಿ ಸಮಾಜದಲ್ಲಿ ಪ್ರಗತಿಪರ ಚಳುವಳಿಗೆ ನಾಂದಿ ಹಾಡಿತು. ವರ್ಣಾಶ್ರಮ ಪದ್ಧತಿಯ ವಿರುದ್ಧ ಸಿಡಿದೆದ್ದ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ಶೋಷಿತ ಮತ್ತು ಅಸ್ಪೃಶ್ಯರಿಗೆ ಸಮಾನತೆಯ ಹಕ್ಕು ಸಿಗಲೇಬೇಕೆಂದು ಪ್ರಜಾಸತ್ತಾತ್ಮಕ ಸಂಘರ್ಷಕ್ಕಿಳಿದರು. ಆರ್ಥಿಕ ಸಂಗತಿಗಳ ಜೊತೆಜೊತೆಗೆ ರಾಜಕೀಯ ಸಾಂಸ್ಕೃತಿಕ ನೆಲೆಗಳನ್ನು ಕುರಿತು ಚಿಂತನೆ ನಡೆಸಿದರು. ಬಂಡವಾಳಶಾಹಿ ಮತ್ತು ಪುರೋಹಿತಶಾಹಿಗಳಿಂದ ಕಾರ್ಮಿಕರ ಶೋಷಣೆ ಮತ್ತು ಭೂಮಾಲಿಕರಿಂದ ನಡೆಯುತ್ತಿರುವ ಕೃಷಿಕರ ಮೇಲಿನ ಶೋಷಣೆಯನ್ನು ಪ್ರಧಾನವಾಗಿಟ್ಟುಕೊಂಡು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ಕ್ರಾಂತಿಕಾರಿ ಹೋರಾಟವನ್ನು ಕೈಗೊಂಡು ಆ ಹೋರಾಟದಲ್ಲಿ ವಿಜಯ ಸಾಧಿಸಿದರು.

ಹೀಗಾಗಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ಈ ಪ್ರಗತಿಪರ ಚಳುವಳಿಗೆ ಜೀವ ತುಂಬಿದರು. ಅನೇಕರಿಗೆ ಜೀವ ನೀಡಿದರು. ಇಂದೆಯೂ ಮತ್ತು ಮುಂದೆಯೂ ಪ್ರಸ್ತುತವಾಗಬಲ್ಲ ವಿಚಾರಗಳು ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಗಳಾಗಿವೆ. ಅವರ ಕ್ರಾಂತಿಯ ಕಿಡಿಗಳಾದ ವಿಚಾರಧಾರೆಗಳನ್ನು ಪ್ರತಿಯೊಬ್ಬ ಮನುಷ್ಯ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಈ ದೇಶದ ಅಭಿವೃದ್ಧಿ ಸಾಧ್ಯವೇ ಆಗಿರುತ್ತದೆ. ಅಂದರೆ ಜ್ಯೋತಿಬಾ ಫುಲೆಯವರು ಹಾಕಿಕೊಟ್ಟ ಸತ್ಯಶೋಧಕ ಸಮಾಜಕ್ಕೆ ನವಚೈತನ್ಯ, ಶಿಕ್ಷಣ ಸಂಘಟನೆ ಹೋರಾಟ ಇವುಗಳ ಅವಶ್ಯಕತೆ, ಭೂ ಒಡೆತನ, ಕೈಗಾರಿಕರಣದಲ್ಲಿ ಕ್ರಾಂತಿ, ಬಂಡವಾಳ ಶಾಹಿ–ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟ, ದೇವರಾವ ಇಂಗಳೆ, ಬಿ.ಶ್ಯಾಮಸುಂದರ್, ದಲಿತ ಪ್ಯಾಂಥರ್, ಬುದ್ಧ–ಬಸವ–ಅಂಬೇಡ್ಕರ್–ಶ್ಯಾಮಸುಂದರ್–ಇಂಗಳೆ–ಡಾ.ಮಲ್ಲಿಕಾರ್ಜುನ ಖರ್ಗೆಜೀ ಈ ಮುಂತಾದ ಮಹಾನೀಯರ ಹಾದಿಯಲ್ಲಿ ಪೋಳ ಇವರು ನಡೆದುಕೊಂಡು ಬರುತ್ತಿರುವುದನ್ನು ಕೂಡ ಗುರುತಿಸಬಹುದು.

ಪ್ರಸ್ತುತ ಸಮಕಾಲಿನ ಸಂದರ್ಭದಲ್ಲಿ ಚಳುವಳಿಗಳು ಕ್ರಾಂತಿ ಹೀನವಾಗುತ್ತಿವೆ. ಮತೀಯವಾದವು ಮತ್ತೇ ಜಾಗೃತವಾಗುತ್ತಿದೆ. ಜಾತಿ ವ್ಯವಸ್ಥೆ ತುಂಬ ಆಳವಾಗಿ ಬೇರೂರಿದೆ. ಪುರೋಹಿತಶಾಹಿ ಮತ್ತು ಬಂಡವಾಳಶಾಹಿ ಇವುಗಳ ಪ್ರಾಬಲ್ಯ ದಿನೇ ದಿನೇ ಹೆಚ್ಚಾಗುತ್ತಾ ಹೋಗುತ್ತಿದೆ. ಕಾರ್ಮಿಕರು ಇನ್ನೂ ಇದ್ದ ಜಾಗದಲ್ಲಿಯೇ ಇದ್ದಾರೆ. ಕೃಷಿ ನೆಲಕಚ್ಚಿದೆ ರೈತ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ಮಹಿಳೆಯ ಶೋಷಣೆ, ಅನ್ಯಾಯ, ಅತ್ಯಾಚಾರ, ದೌರ್ಜನ್ಯ, ದಬ್ಬಾಳಿಕೆ ಇವುಗಳು ಸಮಾಜವನ್ನು ಕಂದಕಕ್ಕೆ ತಳ್ಳುತ್ತಿವೆ. ಮುಖವಾಡಗಳು ಹೆಚ್ಚುತ್ತಾ ನಡೆದಿವೆ. ಸರ್ಕಾರಗಳು ನಿಸಕ್ರಿಯವಾಗಿವೆ. ಪ್ರಜಾಪ್ರಭುತ್ವ ಕ್ಷೀಣಿಸುತ್ತಿದೆ. ಇಂತಹ ವ್ಯವಸ್ಥೆಯಲ್ಲಿ ಮನುಷ್ಯನ ಬಾಳು ದುಸ್ತರವಾಗಿದೆ. ದಲಿತರ, ಮಹಿಳೆಯರ, ಅಲ್ಪಸಂಖ್ಯಾತರ ದನಿಗೆ ಕಿಮ್ಮತ್ತಿಲ್ಲದಂದಾಗಿದೆ.

ಹೀಗಾಗಿ ಇಂತಹ ಶೋಚನಿಯ ಸಂಗತಿಗಳ ಮೇಲೆ ಬೆಳಕು ಚೆಲ್ಲುವುದಕ್ಕಾಗಿಯೇ ಭಾರತದ ಪ್ರಗತಿಪರ ಚಳುವಳಗಳನ್ನು ಕುರಿತು ಇಲ್ಲಿ ಇಡೀಯಾಗಿ ಚರ್ಚಿಸಲು ಸಾಧ್ಯವಾಗಿಲ್ಲ. ಹೀಗಾಗಿ ಕೇವಲ ಮಹಾನಾಯಕ ಅಂಬೇಡ್ಕರ್ ಅವರ ಚಿಂತನೆಗೆ ಪೂರಕವಾಗುವ ಪ್ರಗತಿಪರ ಚಳುವಳಗಳನ್ನಷ್ಟೇ ಪ್ರಸ್ತುತ ಚರ್ಚಿಸಲಾಗಿರುತ್ತದೆ. ಇಂತಹ ಬರೆಹಗಳು ಪ್ರಸ್ತುತತೆ ಇಂದು ಅನಿವಾರ್ಯವಾಗಿದೆ. ಏಕೆಂದರೆ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನದಿಂದ ಆಗುವ ಮುಖ್ಯ ಪ್ರಯೋಜನೆಗಳೆಂದರೆ ಪ್ರಗತಿಪರ ವಿಚಾರಧಾರೆಗಳು ಆಯಾ ಕಾಲ ಘಟ್ಟದಲ್ಲಿ ಉಂಟು ಮಾಡಿರುವ ಪರಿಣಾಮಗಳನ್ನು ತಿಳದುಕೊಳ್ಳಲು ಸಹಾಯಕವಾಗುತ್ತದೆ. ಅಲ್ಲದೆ ಅನೇಕರು ತಾವು ಮಂಡಿಸಿರುವ ವಿಚಾರಗಳನ್ನು ಪ್ರಸ್ತುತ ಸಮಾಜದೊಂದಿಗೆ ಸಮಿಕರಿಸಲು ಮತ್ತೇ ಮುಂದಿನ ಸಮಾಜಕ್ಕೆ ವರ್ಗಾಯಿಸಲು ಅನುಕೂಲವಾಗುತ್ತದೆ. ಜೊತೆಗೆ ಪ್ರಗತಿಪರ ಚಳುವಳಗಳಂದ ಸಮಾಜದಲ್ಲಾದ ಬದಲಾವಣೆಯ ಮಾರ್ಗ ತಿಳದುಕೊಳ್ಳಲು ಮತ್ತು ಹೊಸತನವನ್ನು ಅಳವಡಿಸಿಕೊಳ್ಳಲು ಅನುಕೂಲವಾಗುತ್ತದೆ. ಹೀಗಾಗಿ ಇಂತಹ ಪ್ರಗತಿಪರ ಚಳುವಳಗಳು ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲು ಮತ್ತು ಪರಿಣಾಮವನ್ನು ಅರ್ಥೈಸಲು ಇದು ಹೆಚ್ಚು ಸಹಾಯಕವಾಗುತ್ತದೆ. ಮತ್ತೇ ಕೆಲ ಇತಿ–ಮಿತಿಗಳಗೆ ಒಳಪಟ್ಟಿದೆ. ಅದೇನೆಂದರೆ ಅಧ್ಯಯನದ ದೃಷ್ಟಿಯಿಂದ ಭಾರತ ದೇಶದ ಮಟ್ಟದಲ್ಲಿ ಆಲೋಚಿಸಿದರೂ ಸಮಗ್ರ ಪ್ರಗತಿಪರ ಚಳುವಳಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲು ಕಷ್ಟ. ಅದಕ್ಕಾಗಿ ಇತಿ–ಮಿತಿಯೊಳಗೆ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಚಿಂತನೆಗೆ ಪೂರಕವಾದ ಚಳುವಳ ಮತ್ತು ಈ ಚಳುವಳಗಳ ಆಶಯಗಳನ್ನು ಕುರಿತು ವಿಶ್ಲೇಷಿಸಲಾಗಿರುತ್ತದೆ.

## ಗ್ರಂಥಸೂಚಿ


1. ಟಿ.ಎಂ. ಭಾಸ್ಕರ್, ಗೌತಮಬುದ್ಧ, ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರ್ಗಿ, 2004
2. ಸಿ.ಎಚ್.ರಾಜಶೇಖರ್, ಬುದ್ಧ, ಸೌಮ್ಯಶ್ರೀ ಪ್ರಕಾಶನ, ಬೆಂಗಳೂರು, 2010
3. ಜಯಶೆಟ್ಟಿ ಬಾಲಚಂದ್ರ, ಬುದ್ಧ ಮತ್ತು ಬಸವ, ಬಸವ ಧರ್ಮ ಪ್ರಚಾರ ಸಂಸ್ಥೆ, ಬೀದರ, 2012
4. ಸಿ.ಎಚ್.ರಾಜಶೇಖರ್, ಬುದ್ಧನಂದನ...., ಸೌಮ್ಯಶ್ರೀ ಪ್ರಕಾಶನ, ಬೆಂಗಳೂರು, 2011
5. ಕೆ.ಬಿ.ಚಿಕ್ಕನಾರಾಯಣಪ್ಪ, ಬುದ್ಧವಾಣಿ, ಮಹಾಬೋಧಿ ಸೊಸೈಟಿ, ಬೆಂಗಳೂರು, 2014
6. ವೈ.ಬಿ.ನಂದನ್, ಬುದ್ಧಚರಿತ್ರೆ ಮತ್ತುಧಮ್ಮಸಾರ, ಮಹಾಬೋಧಿ ಸೊಸೈಟಿ, ಬೆಂಗಳೂರು, 2004
7. ಗಿರಿಮಾಜಿರುಕ್ಮಿಣಿ, ಬುದ್ಧನಜೀವನಕಥೆ, ಮಹಾಬೋಧಿ ಸೊಸೈಟಿ, ಬೆಂಗಳೂರು, 2004
8. ಜಿ.ಎಂಕೃಷ್ಣಮೂರ್ತಿ, ಭಗವಾನ ಬುದ್ಧ, ವಸಂತ ಪ್ರಕಾಶನ, ಬೆಂಗಳೂರು, 2012
9. ನಿರೂಪಮಾ, ಗೌತಮ ಬುದ್ಧ, ಸಪ್ನಾ ಬುಕ್ ಹೌಸ್, ಬೆಂಗಳೂರು, 2001
10. ಬಿ.ಎನ್.ರಾಜಾರಾಮ್, ಧಮ್ಮ ಪದ, ಮಹಾಬೋಧಿ ಸೊಸೈಟಿ, ಬೆಂಗಳೂರು, 1984